كِتَابُ التَّوحِيد

# ಕಿತಾಬುತ್ತೌಹೀದ್

(ಅಶ್ಶೈಖ್ ಸಾಲಿಹ್ ಅಲ್ ಉಸೈಮೀನ್, ಅಶ್ಶೈಖ್ ಸಾಲಿಹ್ ಅಲ್
ಫೌಝಾನ್ ಮುಂತಾದ ಹಿರಿಯ ವಿದ್ವಾಂಸರ ವಿವರಣೆಗಳನ್ನು
ಆಧಾರವಾಗಿಟ್ಟುಕೊಂಡು ನಡೆಸಲಾದ ದರ್ಸ್)

ಭಾಗ 02

ಅಬೂ ಹಮ್ಮಾದ್ ಸಲಾಹುದ್ದೀನ್

بِسْمِ اللَّهِ الرَّحْمَٰنِ الرَّحِيمِ

ಪರಮ ದಯಾಮಯನೂ ಕರುಣಾಮಯಿಯೂ ಆದ ಅಲ್ಲಾಹುವಿನ ನಾಮದಿಂದ,

ಸರ್ವಸ್ತುತಿಗಳೂ ಸಕಲಲೋಕಗಳ ರಬ್ಬ್ ಆದ (ಪರಿಪಾಲಕನಾದ) ಅಲ್ಲಾಹುವಿಗೆ ಮೀಸಲು. ಅಂತಿಮ ವಿಜಯವು ಮುತ್ತಕೀನ್‌ಗಳಿಗಾಗಿದೆ. ಅಕ್ರಮಿಗಳ ಹೊರತು (ಇತರರ ವಿರುದ್ಧ) ವೈಷಮ್ಯವಿಲ್ಲ. ಸಜ್ಜನದಾಸರ ರಕ್ಷಕನಾದ ಅಲ್ಲಾಹುವಿನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಪ್ರಾಮಾಣಿಕ ಪ್ರವಾದಿಯಾದ ಮುಹಮ್ಮದ್ (صَلَّى اللَّهُ عَلَيْهِ وَسَلَّمَ) ರವರು ಅವನ (ಅಲ್ಲಾಹುವಿನ) ದಾಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್ (صَلَّى اللَّهُ عَلَيْهِ وَسَلَّمَ) ರವರ ಮೇಲೂ, ಅವರ ಕುಟುಂಬದವರ ಮೇಲೂ, ಅವರ ಸಹಚರರ (ಸಹಾಬಾಗಳ) ಮೇಲೂ ಹಾಗೂ ಪ್ರತಿಫಲದ ದಿನದ ತನಕ ಅವರನ್ನು ಇಹ್ಸಾನ್‌ನೊಂದಿಗೆ ಅನುಸರಿಸಿದವರ ಮೇಲೂ ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ಇರಲಿ.

ಮುಂದುವರಿದು ಹೇಳುವುದೇನೆಂದರೆ :

ಅಲ್ಲಾಹುವಿನ ದಾಸರೇ, ಮುಂದೆ ನಾವು ಕಲಿಯಲು ಹೋಗುತ್ತಿರುವುದು **‘ಕಿತಾಬ್ ಅತ್ತೌಹೀದ್’** ಆಗಿದೆ. ಇದು ಅದರ ಎರಡನೆಯ ತರಗತಿಯಾಗಿದೆ.

## ಪ್ರವಾದಿ (صَلَّىٱللَّهُعَلَيۡهِوَسَلَّمَ) ಸಮುದಾಯದಲ್ಲಿ ಶಿರ್ಕಿನ ಆರಂಭ...

ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُٱللَّهُ) ಹೇಳುತ್ತಾರೆ :

ಪ್ರವಾದಿ (صَلَّىٱللَّهُعَلَيۡهِوَسَلَّمَ) ರವರ ಸಮುದಾಯದಲ್ಲಿ ಪ್ರಪ್ರಥಮವಾಗಿ ಶಿರ್ಕ್ ಆರಂಭವಾದದ್ದು ಫಾತಿಮೀ ಶಿಯಾಗಳ ಮೂಲಕವಾಗಿತ್ತು.

**ಟಿಪ್ಪಣಿ :** ಅವರು (ಫಾತಿಮೀ ಶಿಯಾಗಳು) ತಮ್ಮನ್ನು ಅಲೀಯ್ಯ್ ಮತ್ತು ಫಾತಿಮಾ (رَضِيَٱللَّهُعَنۡهُمَا) ರವರ ಸಂತಾನವೆಂದು ವಾದಿಸುವ ಜನರಾಗಿದ್ದಾರೆ, ವಾಸ್ತವವಾಗಿ ಅವರು ಅಲೀಯ್ಯ್ ಮತ್ತು ಫಾತಿಮಾ (رَضِيَٱللَّهُعَنۡهُمَا) ರವರ ಸಂತಾನಕ್ಕೆ ಸೇರಿದವರಲ್ಲ. ಶಿಯಾಗಳಲ್ಲಿ ಹಲವಾರು ಪಂಗಡಗಳಿವೆ, ಅವರಲ್ಲಿ ಹಲವರು ಕುಫ್ರ್‌ನಲ್ಲಿ ಮತ್ತು ಹಲವು ಮಿಥ್ಯ ವಿಶ್ವಾಸ ಹಾಗೂ ಪಥಭ್ರಷ್ಟತೆಯಲ್ಲಿ ಅತಿರೇಕಕ್ಕೇರಿದ ಜನರಾಗಿದ್ದಾರೆ. ಅವರಾಗಿರುವರು ಮುಹಮ್ಮದ್ (صَلَّىٱللَّهُعَلَيۡهِوَسَلَّمَ) ರವರ ಸಮುದಾಯದಲ್ಲಿ ಸುಮಾರು 400 ವರ್ಷದ ಬಳಿಕ ಶಿರ್ಕ್ ಹಾಗೂ ಇನ್ನಿತರ ಪಥಭ್ರಷ್ಟ ವಿಶ್ವಾಸ ಹಾಗೂ ಆಚರಣೆಗಳನ್ನು ಆರಂಭಿಸಿದವರು. ಸಮಾಧಿಗಳನ್ನು (ಕಬರ್‌ಗಳನ್ನು) ಮೇಲೆತ್ತರಿಸಿ ಕಟ್ಟುವುದು, ಹಾಗೂ ಪ್ರವಾದಿ ಜನ್ಮದಿನಾಚರಣೆ (ಮೀಲಾದುನ್ನೆಬಿ) ಆಚರಿಸುವುದು ಮುಂತಾದ (ನವೀನಾಚಾರಗಳು ಮತ್ತು ಶಿರ್ಕಿನ ಆಚರಣೆಗಳನ್ನು) ಆರಂಭಿಸಿದವರು ಅವರಾಗಿದ್ದಾರೆ. ಅದೇ ರೀತಿ ಸಾಲಿಹೀನ್‌ಗಳು (ಸಜ್ಜನರು) ಮರಣ ಹೊಂದಿದ ನಂತರವೂ ನಮ್ಮನ್ನು ಕಾಣುತ್ತಾರೆ, ಅವರಿಗೆ ಅದರ ದಿವ್ಯ ಶಕ್ತಿಯಿದೆ ಮುಂತಾದ ನವೀನ ಕಲ್ಪನೆಗಳನ್ನು ಅನ್ಯ ಸಮುದಾಯದಿಂದ ಇಸ್ಲಾಮಿಗೆ ಹೊಸದಾಗಿ ಸೇರ್ಪಡಿಸುವಲ್ಲಿ ಮೊದಲಿಗರು ಅವರಾಗಿದ್ದಾರೆ (ಶಿಯಾಗಳಾಗಿದ್ದಾರೆ). ಅದರ (ಶಿಯಾ ಸಿದ್ಧಾಂತದ) ಸ್ಥಾಪಕನು **'ಅಬ್ದುಲ್ಲಾಹ್ ಬಿನ್ ಸಬಅ್'** ಎಂಬ ಯಹೂದಿಯಾಗಿದ್ದಾರೆ. ಪ್ರವಾದಿ ಈಸಾ (عَلَيۡهِٱلسَّلَامُ) ರವರ ಜನತೆಯಲ್ಲಿದ್ದ

ಬೂಲಸ್ (ಪಾಲ್) ನಂತೆ, ಪ್ರವಾದಿ (ﷺ) ರವರ ಜನತೆಯಲ್ಲಿ ಪಥಭ್ರಷ್ಟ ವಿಶ್ವಾಸಗಳನ್ನು ಹೊಸದಾಗಿ ಪ್ರತಿಪಾದಿಸಿದವನು ಅಬ್ದುಲ್ಲಾಹ್ ಬಿನ್ ಸಬಅ್ ಆಗಿದ್ದಾನೆ.

ಶೈಖ್ ಸಾಲಿಹ್ ಅಲ್-ಫೌಝಾನ್ (حفظه الله) ಹೇಳುತ್ತಾರೆ :

ಅದೇ ರೀತಿ ತಮ್ಮ ಸಂತರ ಬಗ್ಗೆ ಅತಿರೇಕವನ್ನು ತಾಳುವ (ಅವರನ್ನು ಆರಾಧಿಸಿ ಅವರಿಗೆ ದಿವ್ಯ ಗುಣ ವಿಶೇಷತೆಗಳನ್ನು ನೀಡುವ) ಪಥಭ್ರಷ್ಟ ಸೂಫಿ ಸಿದ್ಧಾಂತವು ಪ್ರಾರಂಭಗೊಂಡ ವೇಳೆ ಹಾಗೂ ನವ ನವೀನ (ಸೂಫಿ) ಪಂಥದ ಜನರ ಮೂಲಕ ಪ್ರವಾದಿ (ﷺ) ರವರ ಸಮುದಾಯದಲ್ಲಿ ಶಿರ್ಕ್ ಹಾದು ಬಂದವು.

**ಟಿಪ್ಪಣಿ :** ಪ್ರಥಮವಾಗಿ ಶಿಯಾಗಳು ಮತ್ತು ದ್ವಿತೀಯವಾಗಿ ಸೂಫಿಗಳು, ಪ್ರವಾದಿ ಮುಹಮ್ಮದ್ (ﷺ) ಸಮುದಾಯದಲ್ಲಿ ಶಿರ್ಕ್ ಹಾದುಬರಲು ಪ್ರಮುಖ ಕಾರಣೀಕರ್ತರು ಎಂದು ಶೈಖ್ ಸಾಲಿಹ್ ಅಲ್-ಫೌಝಾನ್ (حفظه الله) ಇಲ್ಲಿ ಮುಖ್ಯವಾಗಿ ಉಲ್ಲೇಖಿಸಿದ್ದಾರೆ. ಈ ಇಬ್ಬರಿಗೂ ಇರುವ ಮೂಲವೇನೆಂದರೆ, ಅನ್ಯಸಮುದಾಯದ ಜನರು, ಯಹೂದಿಗಳು, ನಸಾರಾಗಳು, ಮಜೂಸಿಗಳು (ಅಗ್ನಿಆರಾಧಕರು) ಮುಂತಾದವರ ವಿಶ್ವಾಸ ಮತ್ತು ಆಚಾರ ಕರ್ಮಗಳಾಗಿವೆ. ಅವರ ಆಚರಣೆಗಳನ್ನು ಇವರು (ಶಿಯಾ ಮತ್ತು ಸೂಫಿಗಳು) ಅನುಕರಿಸಿಕೊಂಡು ಅದಕ್ಕೆ ಇಸ್ಲಾಮಿನ ಹೆಸರನ್ನು ಅನ್ಯಾಯವಾಗಿ ಜೋಡಿಸಿರುವರು.

ಇನ್ನು ನಾವು ಅರ್ಥೈಸಿಕೊಳ್ಳಬೇಕಾಗಿರುವುದು, ನಮಗೆ ಪ್ರವಾದಿ (ﷺ) ರವರ ಹದೀಸಿನಲ್ಲಿ ಕಾಣಬಹುದಾಗಿದೆ :

« عَنْ عَائِشَةَ، أَنَّ أُمَّ حَبِيبَةَ، وَأُمَّ سَلَمَةَ ذَكَرَتَا كَنِيسَةً رَأَيْنَهَا بِالْحَبَشَةِ - فِيهَا تَصَاوِيرُ - لِرَسُولِ اللَّهِ صلى الله عليه وسلم فَقَالَ رَسُولُ اللَّهِ صلى الله عليه وسلم " إِنَّ أُولَئِكِ إِذَا كَانَ فِيهِمُ الرَّجُلُ الصَّالِحُ فَمَاتَ بَنَوْا عَلَى قَبْرِهِ مَسْجِدًا وَصَوَّرُوا فِيهِ تِلْكَ الصُّوَرَ أُولَئِكِ شِرَارُ الْخَلْقِ عِنْدَ اللَّهِ يَوْمَ الْقِيَامَةِ »

**ಆಯಿಷಾ (رَضِيَ ٱللَّهُ عَنْهَا) ರವರಿಂದ ವರದಿ : ಉಮ್ಮು ಸಲಮಃ ಮತ್ತು ಉಮ್ಮು ಹಬೀಬಃ (رَضِيَ ٱللَّهُ عَنْهُمَا) ರವರಿಬ್ಬರು ಅಬಿಸೀನಿಯಾದ (ನಸಾರಾಗಳ) ಇಗರ್ಜಿಯೊಂದರಲ್ಲಿ (ಮೂರ್ತಿ) ಚಿತ್ರಗಳನ್ನು ಕಂಡಿರುವುದಾಗಿ ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರೊಂದಿಗೆ ಹೇಳಿದರು. ಅದಕ್ಕೆ ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು : ಯಾವಾಗ ಅವರ ಪೈಕಿಯಿರುವ ಸಜ್ಜನ ವ್ಯಕ್ತಿಯು ಮರಣಹೊಂದುತ್ತಾನೋ, ಆಗ ಅವರು ಅವನ ಸಮಾಧಿಯ ಮೇಲೆ ಆರಾಧನಾ ಕೇಂದ್ರಗಳನ್ನು ನಿರ್ಮಿಸುತ್ತಿದ್ದರು ಹಾಗೂ ಅದರಲ್ಲಿ ಆ (ಮೂರ್ತಿ) ಚಿತ್ರಗಳನ್ನು ಬಿಡಿಸುತ್ತಿದ್ದರು. ಅವರು ಅಂತ್ಯದಿನದಂದು ಅಲ್ಲಾಹುವಿನ ಬಳಿ ಅತ್ಯಂತ ನಿಕೃಷ್ಟ ಸೃಷ್ಟಿಗಳಾಗಿರುವರು.** [1]

ಈ ರೀತಿ ಸಮಾಧಿಗಳ ಮೇಲೆ ಆರಾಧನಾ ಕೇಂದ್ರಗಳನ್ನು ನಿರ್ಮಿಸುವುದು ನಸಾರಾಗಳ ಪದ್ಧತಿಯಾಗಿದೆ. ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು :

« لَعَنَ اللَّهُ الْيَهُودَ وَالنَّصَارَى اتَّخَذُوا قُبُورَ أَنْبِيَائِهِمْ مَسَاجِدَ »

1. (ಅಲ್-ಬುಖಾರಿ : 427, ಮುಸ್ಲಿಮ್ : 528)

**"ಯಹೂದಿ ಮತ್ತು ನಸಾರಾಗಳ ಮೇಲೆ ಅಲ್ಲಾಹುವಿನ ಶಾಪವಿರಲಿ. ಅವರು ತಮ್ಮ ಪ್ರವಾದಿಗಳ ಸಮಾಧಿಗಳನ್ನು ಆರಾಧನಾ ಕೇಂದ್ರವಾಗಿ ಸ್ವೀಕರಿಸಿಕೊಂಡರು."** [2]

ಹಾಗಾಗಿ ಶಿರ್ಕ್ ಅನ್ನುವುದು ಇಸ್ಲಾಮಿನಿಂದ ಆರಂಭವಾದುದಲ್ಲ. ಅದು ಅನ್ಯಸಮುದಾಯದಿಂದ ಆಮದುಗೊಂಡ ಪದ್ಧತಿಯಾಗಿದೆ.

ಮುಸ್ಲಿಮ್ ಸಮುದಾಯದಲ್ಲಿ ಶಿರ್ಕ್ ವ್ಯಾಪಿಸಿವುದರಲ್ಲಿ ಯಾವುದೇ ಸಂದೇಹವಿಲ್ಲ. ಶಿರ್ಕ್ ಈ ಸಮುದಾಯದಕ್ಕೆ ಬಾಧಿಸುತ್ತದೆ ಎಂಬುದು ವಾಸ್ತವಿಕತೆಯಾಗಿದೆ. ಶಿರ್ಕ್ ನಮಗೆ ಅಥವಾ ನಮ್ಮ ಈ ಸಮುದಾಯಕ್ಕೆ ಬಾಧಿಸಲಾರದು ಎಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ.

« عَنْ ثَوْبَانَ قَالَ قَالَ رَسُولُ اللَّهِ صَلّى اللّه عَلَيْهِ وَسَلّمَ لَا تَقُومُ السّاعَةُ حَتّى تَلْحَقَ قَبَائِلُ مِنْ أُمّتِي بِالْمُشْرِكِينَ وَحَتّى يَعْبُدُوا الْأَوْثَانَ »

**ಸೌಬಾನ್ (رَضِيَ ٱللَّهُ عَنْهُ) ರವರಿಂದ ವರದಿ : ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು : "ನನ್ನ ಸಮುದಾಯದ ಪೈಕಿ (ಕೆಲವೊಂದು) ಗೋತ್ರದವರು ಮುಶ್ರಿಕ್‌ಗಳೊಂದಿಗೆ ಕೂಡಿ ಅವರೊಂದಿಗೆ ವಿಗ್ರಹಗಳನ್ನು ಆರಾಧಿಸುವ ತನಕ ಅಂತ್ಯದಿನವು ಸಂಭವಿಸುವುದಿಲ್ಲ."** [3]

ಇದು ಭಯಾನಕವಾದ ವಿಚಾರವಾಗಿದೆ. ಈ ಹದೀಸಿನ ಕುರಿತಂತೆ ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ ٱللَّهُ) ಹೇಳುತ್ತಾರೆ : **"ಇಂದಿನ ಕಾಲಘಟ್ಟದಲ್ಲಿ ಅವರು ಶಿರ್ಕ್‌ನ**

2. (ಅಲ್-ಬುಖಾರಿ : 1330 ಮತ್ತು ಮುಸ್ಲಿಮ್ : 529)

3. (ಸುನನ್ ಅತ್ತಿರ್ಮಿದೀ : 2219)

**ಆಚರಣೆಗಳನ್ನು ತವಸ್ಸುಲ್ ಎಂದು ನಿರೂಪಿಸುತ್ತಿರುವುದು ಆಘಾತಕಾರಿ ವಿಚಾರವಾಗಿದೆ."**

ಆ ನಾಮದಿಂದ ಅವರಿಂದು ಶಿರ್ಕ್ ಕೈಗೊಳ್ಳುತ್ತಿದ್ದಾರೆ. ತವಸ್ಸುಲ್‌ನಲ್ಲಿ ಎರಡು ವಿಧಗಳಿವೆ : **1) ಅನುಮತಿಸಲ್ಪಟ್ಟ ತವಸ್ಸುಲ್ 2) ನಿಷಿದ್ಧವಾದ ತವಸ್ಸುಲ್**. ಇವರಿಂದು ಮಾಡುತ್ತಿರುವುದು ನಿಷೇಧಿಸಲ್ಪಟ್ಟ ತವಸ್ಸುಲ್ ಆಗಿದೆ. ಅಲ್ಲಾಹು (سُبۡحَانَهُۥ وَتَعَالَىٰ) ಹೇಳುತ್ತಾನೆ :

﴿وَٱلَّذِينَ ٱتَّخَذُواْ مِن دُونِهِۦٓ أَوۡلِيَآءَ مَا نَعۡبُدُهُمۡ إِلَّا لِيُقَرِّبُونَآ إِلَى ٱللَّهِ زُلۡفَىٰٓ﴾

**"ಅಲ್ಲಾಹುವಿನ ಹೊರತು ಅನ್ಯರನ್ನು ತಮ್ಮ ಔಲಿಯಾಗಳಾಗಿ (ರಕ್ಷಕರಾಗಿ) ಮಾಡಿಕೊಂಡವರು (ಹೇಳುತ್ತಾರೆ), ನಮ್ಮನ್ನು ಅಲ್ಲಾಹುವಿನೆಡೆಗೆ ಹತ್ತಿರಗೊಳಿಸುವ ಸಲುವಾಗಿಯೇ ಹೊರತು ನಾವವರನ್ನು ಆರಾಧಿಸುತ್ತಿಲ್ಲ."** [4]

ಇದಾಗಿತ್ತು ಅಂದಿನ ಮುಶ್ರಿಕ್‌ಗಳ ವಿಶ್ವಾಸ, ಇದನ್ನು ನಾವು ಪ್ರಸ್ತುತ ಕಾಲಘಟ್ಟದಲ್ಲೂ ಕಾಣಬಹುದಾಗಿದೆ. ಅಹ್ಲುಸ್ಸುನ್ನಃದ ಶ್ರೇಷ್ಠ ವಿದ್ವಾಂಸರಾದ ಇಮಾಮ್ ಸುಯೂತಿ (رَحِمَهُ ٱللَّهُ) (ಮರಣ ಹಿಜ್ರಃ 911 ವರ್ಷ) ರವರು ತಮ್ಮ ಗ್ರಂಥವಾದ **'ಅಲ್-ಅಮ್ರ್ ಬಿಲ್ ಇತ್ತಿಬಾಅ್ ವನ್ನಹ್‌ಯು ಅನಿಲ್ ಇಬ್ತಿದಾಅ್'** ನಲ್ಲಿ **"ವಿಗ್ರಹ ಆರಾಧನೆಯ ಆರಂಭ"** ಎಂಬ ಅಧ್ಯಾಯದಡಿಯಲ್ಲಿ ಹೇಳುತ್ತಾರೆ :

4. (ಕುರ್‌ಆನ್ 39 : 3)

"ನೀನು ಅರಿತುಕೊ, ಗೋರಿಗಳ ಸಮೀಪ ನಮಾಝ್ ಮಾಡುವುದನ್ನು ವಿದ್ವಾಂಸರುಗಳು ಆಕ್ಷೇಪಿಸಿರುವರು, ಅದಕ್ಕಿರುವ ಪ್ರಮುಖ ಕಾರಣವು ಜನರದನ್ನು ವಿಗ್ರಹವಾಗಿ ಸ್ವೀಕರಿಸಿಕೊಳ್ಳುತ್ತಾರೆ ಎಂಬುದಾಗಿದೆ. ಇಮಾಮ್ ಶಾಫಿಈ (رَحِمَهُ ٱللَّهُ) ರವರು ವ್ಯಕ್ತಿಗಳನ್ನು ಮಿತಿಮೀರಿ ಆದರಿಸುವುದನ್ನು ಅಸಹ್ಯಪಡುತ್ತಿದ್ದರು. ಏಕೆಂದರೆ ಜನರು ಈ ರೀತಿ ಮಿತಿಮೀರಿ ಆದರಿಸಿ ಆ ವ್ಯಕ್ತಿಯು ಮರಣ ಹೊಂದಿದ ಬಳಿಕ ಅವರ ಸಮಾಧಿಯನ್ನು ಆರಾಧನಾ ಕೇಂದ್ರವಾಗಿ ಪರಿವರ್ತಿಸುವರು ಎಂಬ ಭಯ ಅವರಿಗಿತ್ತು. ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಅಲ್ಲಾಹುವಿನೊಂದಿಗೆ : **"ಓ ಅಲ್ಲಾಹ್! ನನ್ನ ಸಮಾಧಿಯನ್ನು ಆರಾಧಿಸಲ್ಪಡುವ ವಿಗ್ರಹದಂತೆ ಮಾಡದಿರು"** ಎಂದು ಪ್ರಾರ್ಥಿಸಿರುವುದು ಇದೇ ಕಾರಣದಿಂದಾಗಿತ್ತು.

ಮುಂದುವರಿದು ಇಮಾಮ್ ಸುಯೂತಿ (رَحِمَهُ ٱللَّهُ) ಹೇಳುತ್ತಾರೆ :

'ಲಾತ್' ಓರ್ವ ಸಜ್ಜನ ದಾಸರಾಗಿದ್ದರು. ಅವರು ಹಜ್ಜ್ ನಿರ್ವಹಿಸಲು ಬರುತ್ತಿದ್ದ ಜನರಿಗೆ ಆಹಾರ ಪಾನೀಯಗಳನ್ನು ಒದಗಿಸುತ್ತಿದ್ದರು. ಅವರು ಮರಣಹೊಂದಿದ ಬಳಿಕ ಜನರು ಅವರನ್ನು ಅತಿಯಾಗಿ ಆದರಿಸುತ್ತಾ ನಂತರ ಅವರ ಸಮಾಧಿಯ ಬಳಿ ನಿಂತು ಅವರ ಸಾಮಿಪ್ಯತೆಯನ್ನು ಅರಸಲು ಪ್ರಾರಂಭಿಸಿದರು. (ಶಿರ್ಕ್‌ನ ಆರಂಭವಾಗುವುದು ಈ ರೀತಿಯಲ್ಲಾಗಿದೆ.)

ಇಮಾಮ್ ಸುಯೂತಿ (رَحِمَهُ ٱللَّهُ) ಮುಂದುವರಿದು ಹೇಳುತ್ತಾರೆ :

ಪಥಭ್ರಷ್ಟರಾದ ಅನೇಕ ಜನರು ಸಾಲಿಹೀನ್‌ಗಳ (ಸಜ್ಜನರ) ಸಮಾಧಿಯ ಬಳಿ ಅತ್ಯಂತ ವಿನಯ ವಿನಮ್ರತೆಯನ್ನು ತೋರಿಸುತ್ತಾ ಅತೀವ ವಿಧೇಯರಾಗಿ ಹೃದಯಪೂರ್ವಕವಾಗಿ ಆರಾಧಿಸುವುದನ್ನು ನಿನಗೆ ಕಾಣಸಿಗುತ್ತವೆ, (ಆಶ್ಚರ್ಯಕರವೆಂದರೆ) ಅವರಿಂದ ಆ ರೀತಿಯ ವಿನಯ ವಿನಮ್ರತೆಯು

ಅಲ್ಲಾಹುವಿನ ಮಸ್ಜಿದ್‌ಗಳಲ್ಲಾಗಲಿ, ರಾತ್ರಿಯ ಹೊತ್ತಿನ (ತಹಜ್ಜುದ್‌ನ) ಪ್ರಾರ್ಥನೆಯಲ್ಲಾಗಲೀ ಕಾಣಸಿಗದು!. ಯಾತ್ರೆ ಹೋಗಲು ಅನುಮತಿಸಲಾದ ಮಸ್ಜಿದ್‌ಗಳಲ್ಲೂ (ಅರ್ಥಾತ್ ಮಸ್ಜಿದುಲ್ ಹರಮ್, ಮಸ್ಜಿದುನ್ನಬವಿಯ್ಯ್ ಹಾಗೂ ಮಸ್ಜಿದುಲ್ ಅಕ್‌ಸಾದಲ್ಲೂ) ಆ ರೀತಿಯ ವಿನಯ ವಿನಮ್ರತೆಯಲ್ಲಿ ಪ್ರಾರ್ಥನೆ ಅಥವಾ ನಮಾಝುನ್ನು ಅವರು ನಿರೀಕ್ಷಿಸಲಾರರು!. ಈ ರೀತಿ ಯಾರಾದರೂ ಸಮಾಧಿಗಳ ಬಳಿ ತನ್ನ ಪ್ರಾರ್ಥನೆಗೆ ಉತ್ತರ ಲಭಿಸುವುದೆಂದು ಭಾವಿಸುವುದಾದರೆ ಅದು ತಡೆಯಲ್ಪಟ್ಟ ಹಾಗೂ ಹರಾಮ್‌ಗೆ ನಿಕಟವಾಗಿರುವ ಕಾರ್ಯವಾಗಿದೆ.

ಸಹಾಬಿಗಳಿಗೆ ಅದೆಷ್ಟೋ ಕಷ್ಟ ಕಾರ್ಪಣ್ಯಗಳು ಬಾಧಿಸಿದ್ದವು, ಅವರಿಗೆ ಬರಗಾಲ (ಕೂಡ) ಬಂದಿತ್ತು, ಅದೆಷ್ಟೋ ದುರಂತಗಳು ಪ್ರವಾದಿ (ﷺ) ರವರ ಮರಣದ ಬಳಿಕ ಸಂಭವಿಸಿದ್ದವು, ಅದಾಗ್ಯೂ ಅವರು ರಸೂಲ್ (ﷺ) ರವರ ಸಮಾಧಿಯ ಬಳಿ ತೆರಳಿ ಬರಗಾಲ ಬಂದಾಗ ಮಳೆಗಾಗಿ ಪ್ರಾರ್ಥಿಸಲಿಲ್ಲವೇಕೆ? ಯಾಕಾಗಿ ಅವರು ಸೃಷ್ಟಿಗಲ್ಲಿ ಶ್ರೇಷ್ಠರಾದ ಪ್ರವಾದಿ (ﷺ) ರವರೊಂದಿಗೆ ಸಹಾಯ (ಇಸ್ತಿಗಾಸ) ಯಾಚಿಸಲಿಲ್ಲ? ಅಂದಿನ ಕಾಲದ ಖಲೀಫರಾಗಿದ್ದ ಉಮರ್ (رَضِيَ ٱللَّٰهُ عَنْهُ) ರವರು ಬರಗಾಲ ಬಂದ ಸಂದರ್ಭದಲ್ಲಿ ಅವರು ತೆರಳಿದ್ದು ಅಂದು ಜೀವಂತವಾಗಿದ್ದ ಪ್ರವಾದಿ (ﷺ) ರವರ ಚಿಕ್ಕಪ್ಪರಾದ ಅಬ್ಬಾಸ್ (رَضِيَ ٱللَّٰهُ عَنْهُ) ರವರ ಬಳಿಗಾಗಿತ್ತು. ಅವರಲ್ಲಿ ಅಬ್ಬಾಸ್ (رَضِيَ ٱللَّٰهُ عَنْهُ) ರವರೊಂದಿಗೆ ವಿನಂತಿಸಿದ್ದು ನಮಗಾಗಿ ಅಲ್ಲಾಹುವಿನೊಂದಿಗೆ ಪ್ರಾರ್ಥಿಸಿರಿ ಎಂದಾಗಿತ್ತು.

ಆದ್ದರಿಂದ ಓ ಮುಸ್ಲಿಮ್!, **ಒಂದು ವೇಳೆ ನೀನು ಅಲ್ಲಾಹುವಿನ ಉತ್ತಮ ದಾಸನಾಗಿರುವುದಾದರೆ ಸಲಫ್‌ಗಳ (ಸಜ್ಜನ ಪೂರ್ವಿಕರ ಅರ್ಥಾತ್ ಪ್ರವಾದಿ ಮತ್ತು ಸಹಾಬಿಗಳ) ಮಾರ್ಗವನ್ನು ಅನುಸರಿಸು**. ನೀನು ನಿಷ್ಕಳಂಕವಾದ ತೌಹೀದನ್ನು

ಸ್ಥಿರಗೊಳಿಸು. ಅಲ್ಲಾಹುವಿನ ಹೊರತು ಅನ್ಯರನ್ನು ಆರಾಧಿಸದಿರು. ಅಲ್ಲಾಹುವಿನೊಂದಿಗೆ ಯಾವುದೊಂದನ್ನೂ ಸಹಭಾಗಿಯಾಗಿ ಮಾಡದಿರು. ಅಲ್ಲಾಹು (سُبْحَانَهُ وَتَعَالَىٰ) ಹೇಳಿದಂತೆ :

﴿فَإِيَّـٰىَ فَٱعۡبُدُونِ ٥٦﴾

**"ಆದ್ದರಿಂದ, ನನ್ನನ್ನು ಮಾತ್ರ ಆರಾಧಿಸಿರಿ"** [5]

ಅದೇ ರೀತಿ ಅಲ್ಲಾಹು (سُبْحَانَهُ وَتَعَالَىٰ) ಹೇಳಿದನು :

﴿فَمَن كَانَ يَرۡجُواْ لِقَآءَ رَبِّهِۦ فَلۡيَعۡمَلۡ عَمَلٗا صَٰلِحٗا وَلَا يُشۡرِكۡ بِعِبَادَةِ رَبِّهِۦٓ أَحَدَۢا ١١٠﴾

**"ಹಾಗಾಗಿ ಯಾರು ತನ್ನ ರಬ್ಬ್‌ಅನ್ನು ಭೇಟಿಯಾಗಲು ನಿರೀಕ್ಷಿಸುತ್ತಾನೋ, ಅವನು ಸತ್ಕರ್ಮಗಳನ್ನು ನಿರ್ವಹಿಸಲಿ ಮತ್ತು ತನ್ನ ರಬ್ಬ್‌ನೊಂದಿಗೆ ಆರಾಧನೆಯಲ್ಲಿ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ."** [6]

ಅವನ ಹೊರತು ಯಾರೊಬ್ಬರನ್ನೂ ನೀನು ಆರಾಧಿಸದಿರು, ಅವನ ಹೊರತು ಅನ್ಯರೊಂದಿಗೆ ಪ್ರಾರ್ಥಿಸದಿರು, ಅವನ ಹೊರತು ಅನ್ಯರೊಂದಿಗೆ ನೀನು ಸಹಾಯವನ್ನು ಯಾಚಿಸದಿರು. ಅವನ ಹೊರತು ತಡೆದಿಡುವವನೂ, ನೀಡುವವನೂ, ಉಪಕಾರ ಮಾಡುವವನೂ, ಹಾನಿಯನ್ನು ತಡೆಯುವವನು ಯಾರೂ ಇಲ್ಲ."

---

5. (ಕುರ್‌ಆನ್ 29 : 56)
6. (ಕುರ್‌ಆನ್ 18 : 110)

ಹಾಗಾಗಿ ವಿದ್ವಾಂಸರು ನಮಗೆ ಕಲಿಸಿಕೊಟ್ಟಿರುವುದು ಅಷ್ಟೊಂದು ಸ್ಪಷ್ಟವಾಗಿದೆ. ಸಹೋದರರೇ, ನಮ್ಮ ದೀನ್ ಬಹಳ ಸ್ಪಷ್ಟವಾಗಿದೆ. ಪ್ರವಾದಿ ಹಾಗೂ ಸಹಾಬಿಗಳ ಮಾರ್ಗವು ತೌಹೀದ್ ಆಗಿದೆ. ಆದರೆ ಶೈತಾನ್ ಜನರಿಗೆ (ಶಿರ್ಕನ್ನು) ಒಳಿತೆಂದು ತೋರ್ಪಡಿಸಿ ಅವರನ್ನು ನರಕಕ್ಕೆ ಕೊಂಡೊಯ್ಯುವ ಬಹುದೊಡ್ಡ ಬಾಗಿಲೊಂದನ್ನು ತೆರೆದುಕೊಟ್ಟಿದ್ದಾನೆ. ಹಾಗಾಗಿ ಓರ್ವನು ಎಂತೆಂತಹ ಪವಾಡಗಳನ್ನು ಮಾಡಿದರೂ ನಾವು ಅದರಿಂದ ಆಶ್ಚರ್ಯಚಕಿತರಾಗಬಾರದು.

ಇಮಾಮ್ ಶಾಫಿಈ (رَحِمَهُ ٱللَّهُ) ಹೇಳಿದರು :

« إِذَا رَأَيْتُمُ الرَّجُلَ يَمْشِي عَلَى الْمَاءِ، وَيَطِيرُ فِي الْهَوَاءِ، فَلَا تَغْتَرُّوا بِهِ حَتَّى تَعْرِضُوا أَمْرَهُ عَلَى الْكِتَابِ وَالسُّنَّةِ »

**"ಒಂದುವೇಳೆ ನೀವು ಓರ್ವ ವ್ಯಕ್ತಿಯು ನೀರಿನ ಮೇಲೆ ನಡೆಯುವುದನ್ನು ಕಂಡರೂ, ಗಗನದಲ್ಲಿ ಹಾರಾಡುವುದನ್ನು ಕಂಡರೂ –ಅವನ ಕಾರ್ಯವನ್ನು ಕುರ್‌ಆನ್ ಮತ್ತು ಸುನ್ನತ್ ಮೂಲಕ ಪರೀಶೀಲಿಸುವ ತನಕ– ಅವನಿಂದ ವಂಚನೆಗೊಳಗಾಗದಿರಿ."** [7]

ಶೈಖ್ ಸಾಲಿಹ್ ಅಲ್–ಫೌಝಾನ್ (حَفِظَهُ ٱللَّهُ) ಹೇಳುತ್ತಾರೆ :

ಅಲ್ಲಾಹು ಪ್ರವಾದಿಗಳ ನಂತರ ತನ್ನ ದೀನನ್ನು ಸಂರಕ್ಷಿಸುವ ಕ್ರಿಯೆಯನ್ನು ಉಲಮಾಗಳ ಮೂಲಕ ನಿರ್ವಹಿಸುವ ವಾಗ್ದಾನವನ್ನು ಮಾಡಿರುವನು. ನೈಜ ಧರ್ಮವು ಅಪರಿಚಿತ ಹಂತಕ್ಕೆ ತಲುಪುವಾಗ ಅದನ್ನು ಸುಧಾರಿಸುವ ಸಲುವಾಗಿ ಪ್ರತಿ

---

7. (ತಬಕಾತ್ ಅಲ್–ಫುಕಹಾಅ್ ಅಶ್–ಶಾಫಿಈನ್ 1 : 32)

ಶತಮಾನಗಳಿಗೊಂದು ಮುಜದ್ದಿದ್‌ಗಳನ್ನು (ಸುಧಾರಕರಾದ ವಿದ್ವಾಂಸರನ್ನು) ಅಲ್ಲಾಹು ನಿಯೋಗಿಸುತ್ತಾನೆ. ಹೀಗೆ ಸತ್ಯವಾದ ದೀನನ್ನು ಸಂರಕ್ಷಿಸುವ ಉಲಮಾಗಳು ನೆಲೆಗೊಳ್ಳುವರು, ಪ್ರವಾದಿ (ﷺ) ರವರು ಹೇಳಿದರು :

« لاَ تَزَالُ طَائِفَةٌ مِنْ أُمَّتِي ظَاهِرِينَ عَلَى الْحَقِّ لاَ يَضُرُّهُمْ مَنْ خَذَلَهُمْ حَتَّى يَأْتِيَ أَمْرُ اللَّه وَهُمْ كَذَلِكَ »

**"ಅಲ್ಲಾಹುವಿನ ಆಜ್ಞೆಯು ಬಂದೆರಗುವವರೆಗೂ (ಅರ್ಥಾತ್ ಲೋಕಾಂತ್ಯವು ಸಂಭವಿಸುವವರೆಗೂ) ನನ್ನ ಸಮುದಾಯದಲ್ಲಿರುವ ಗುಂಪೊಂದು ವಿಜಯಿಗಳಾಗುತ್ತಲೇ ಸದಾ ಸತ್ಯದ ಮೇಲೆ ನೆಲೆನಿಂತಿರುವುದು. ಅವರನ್ನು ತಿರಸ್ಕರಿಸುವವರಿಂದ (ಎದುರಾಳಿಗಳಿಂದ ಹಾಗೂ ಆಕ್ಷೇಪಿಸುವವರಿಂದ) ಅವರು ಯಾವುದೇ ಹಾನಿಗೊಳಗಾಗಲಾರರು"** [8]

**ಟಿಪ್ಪಣಿ :** ಪ್ರವಾದಿ (ﷺ) ರವರು ಹೇಳಿದರು :

« إِنَّ الْإِسْلَامَ بَدَأَ غَرِيبًا وَسَيَعُودُ غَرِيبًا كَمَا بَدَأَ، فَطُوبَى لِلْغُرَبَاءِ. قِيلَ: مَنْ هُمْ يَا رَسُولَ اللهِ ؟ قَالَ: الَّذِينَ يَصْلُحُونَ إِذَا فَسَدَ النَّاسُ »

**"ಖಂಡಿತವಾಗಿಯೂ, ಇಸ್ಲಾಮ್ ಆರಂಭವಾದದ್ದು ಅಪರಿಚಿತ ಸ್ಥಿತಿಯಲ್ಲಾಗಿತ್ತು, ಅದು ಆರಂಭವಾದಂತೆಯೇ ಅದು ಅಪರಿಚಿತ ಸ್ಥಿತಿಗೆ ಮರಳುವುದು, ಹಾಗಾಗಿ ಸ್ವರ್ಗದ**

8. (ಬುಖಾರಿ ಮತ್ತು ಮುಸ್ಲಿಮ್)

**ಸುವಾರ್ತೆಯು ಅಪರಿಚಿತರಿಗಾಗಿದೆ. ಆಗ ಸಹಾಬಿಗಳು ಆ ಅಪರಿಚಿತರು ಯಾರೆಂದು ಪ್ರವಾದಿ (صَلَّى ٱللَّٰهُ عَلَيْهِ وَسَلَّمَ) ರೊಂದಿಗೆ ಪ್ರಶ್ನಿಸಿದರು, ಅವರು (ಪ್ರವಾದಿ صَلَّى ٱللَّٰهُ عَلَيْهِ وَسَلَّمَ) ಉತ್ತರಿಸಿದರು : ಅವರು ಯಾರೆಂದರೆ ಜನರು ಪಥಭ್ರಷ್ಟರಾದಾಗ ಅವರನ್ನು ಸುಧಾರಿಸುವವರಾಗಿದ್ದಾರೆ."** [9]

ಅವರಲ್ಲಿ ಪ್ರಥಮರು ಉಲಮಾಗಳಾಗಿದ್ದಾರೆ. ಯಾರಾದರೂ ಯಾವುದೇ ರೀತಿಯಲ್ಲಿ ಈ ದೀನನ್ನು ವ್ಯತಿರಿಕ್ತವಾಗಿಸಲು ಪ್ರಯತ್ನಿಸಿದರೂ ಅಲ್ಲಾಹು ಈ ದೀನನ್ನು ಉಲಮಾಗಳ ಮೂಲಕ ಸಂರಕ್ಷಿಸುವನು.

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ (رَحِمَهُ ٱللَّٰهُ) ರವರ ಶಿಷ್ಯರೂ ಪ್ರಸಿದ್ಧ ವಿದ್ವಾಂಸರಾದ ಇಮಾಮ್ ಶಂಸುದ್ದೀನ್ ಅಝ್ಝಹಬೀ (رَحِمَهُ ٱللَّٰهُ) (ಮರಣ 748 ಹಿಜರಿ ವರ್ಷ) ರವರು ತಮ್ಮ ಗ್ರಂಥವಾದ **'ಸಿಯರ್ ಅಅ್‌ಲಾಮ್ ಅನ್ನುಬಲಾಅ್'** ನಲ್ಲಿ ಒಂದು ಘಟನೆಯನ್ನು ಉಲ್ಲೇಖಿಸುತ್ತಾರೆ :

"ಖಲೀಫರಾಗಿದ್ದ ಹಾರೂನ್ ರಶೀದ್ ಒಮ್ಮೆ ಓರ್ವ ಝಿಂದೀಕ್ [10] ವ್ಯಕ್ತಿಯನ್ನು ಶಿಕ್ಷಿಸುವ ಸಲುವಾಗಿ ವಶಕ್ಕೆ ತೆಗೆದುಕೊಂಡರು. ಆಗ ಆ ವ್ಯಕ್ತಿಯು ಹೇಳಿದನು : "ನೀವು ನನ್ನನ್ನು ಶಿಕ್ಷಿಸಿ ಕೊಲ್ಲಬಹುದು, ಆದರೆ ನಾನು ಅನೇಕ ಸುಳ್ಳು ಹದೀಸ್‌ಗಳನ್ನು ನಿರ್ಮಿಸಿರುವೆನು ಅದನ್ನು ನೀವೇನು ಮಾಡುವಿರಿ?" ಇನ್ನೊಂದು ವರದಿಯಲ್ಲಿ "ನಾನು ನಾಲ್ಕು ಸಾವಿರ ಹದೀಸ್‌ಗಳನ್ನು ಹೊಸದಾಗಿ ನಿರ್ಮಿಸಿರುವೆನು ಅದನ್ನು ನೀವೇನು ಮಾಡುವಿರಿ?" ಆಗ ಖಲೀಫಃ ಹಾರೂನ್ ರಶೀದ್ (رَحِمَهُ ٱللَّٰهُ)

---

9. (ಇಮಾಮ್ ಅಲ್ಬಾನೀ رَحِمَهُ ٱللَّٰهُ ತಮ್ಮ ಸಿಲ್‌ಸಿಲಃ ಅಲ್-ಅಹಾದೀಸ್ ಅಸ್ಸಹೀಹಃದಲ್ಲಿ ಸಹೀಹ್ ಎಂದು ದೃಢೀಕರಿಸಿರುವರು)

10. ಒಳಗೆ ಕುಫ್ರ್ ವಿಶ್ವಾಸವನ್ನಿಟ್ಟು ಹೊರಗೆ ಇಸ್ಲಾಮನ್ನು ಪ್ರಕಟಿಸುವವನು.

ಹೇಳಿದರು : ಅಬೂ ಇಸ್‌ಹಾಕ್ ಅಲ್–ಫಝಾರೀ ಹಾಗೂ ಇಬ್ನ್ ಅಲ್–ಮುಬಾರಕ್ (رَحِمَهُ ٱللَّٰهُ) ರವರನ್ನು ನೀನು ಏನು ಮಾಡುತ್ತೀ, ಓ ಅಲ್ಲಾಹುವಿನ ಶತ್ರು!, ನೀನು ಯಾವುದನ್ನೆಲ್ಲಾ ಸುಳ್ಳಾಗಿ ನಿರ್ಮಿಸಿರುವೆಯೋ ಅವೆಲ್ಲವನ್ನೂ ಅವರು ಒಂದೊಂದಾಗಿ ಹೊರತೆಗೆಯುವರು."

ಗಮನಿಸಿರಿ ಓ ಸಹೋದರರೇ, ಇಂದು ಅದೆಷ್ಟೋ ಸುಳ್ಳು ಹದೀಸ್‌ಗಳಿವೆ, ಅದರಲ್ಲಿ ಸಹೀಹ್ (ಅಧಿಕೃತ) ಯಾವುದು ಹಾಗೂ ದಯೀಫ್ (ದುರ್ಬಲ) ಯಾವುದು ಎಂಬುದು ನಮಗೆ ವ್ಯಕ್ತವಾಗುವುದು ಹೇಗೆ? ಅದು ಉಲಮಾಗಳ ಮೂಲಕವಾಗಿದೆ!. ಲಕ್ಷಗಟ್ಟಲೆ ಸುಳ್ಳು ಹದೀಸ್‌ಗಳನ್ನು ರಸೂಲ್ (صَلَّى ٱللَّٰهُ عَلَيْهِ وَسَلَّمَ) ರವರ ಹೆಸರಿನಲ್ಲಿ ದುಷ್ಟರು ನಿರ್ಮಿಸಿದ್ದರು. ಅವುಗಳನ್ನು ಬಯಲಿಗೆಳೆದವರು ಉಲಮಾಗಳಾಗಿರುವರು.

ಇಮಾಮ್ ಶಂಸುದ್ದೀನ್ ಅಝ್ಝಹಬೀ (رَحِمَهُ ٱللَّٰهُ) ಹೇಳಿದರು :

**"ಅಲ್ಲಾಹುವಿನ ಮೇಲಾಣೆ! ಒಂದು ವೇಳೆ ಪಾಂಡಿತ್ಯವುಳ್ಳ ಹಿರಿಯ ಉಲಮಾಗಳು ಇಲ್ಲದೆ ಹೋಗಿರುತ್ತಿದ್ದರೆ, ಝಿಂದೀಕ್ ಆದ ಜನರು (ಪ್ರವಚನಗಳನ್ನು ನೀಡಲು) ಮಿಂಬರ್ ಏರುತ್ತಿದ್ದರು."**

ಹಾಗಾಗಿ ಅಲ್ಲಾಹು ಪ್ರವಾದಿಗಳ ನಂತರ ಉಲಮಾಗಳ ಮೂಲಕ ಈ ದೀನನ್ನು ಸಂರಕ್ಷಿಸಿರುವನು. ಅವರು ಪ್ರವಾದಿಗಳ ವಾರೀಸುದಾರರಾಗಿರುವರು. ಹಾಗಾಗಿ ಉಲಮಾಗಳ ಉನ್ನತ ಸ್ಥಾನವನ್ನು ನಾವು ಅರ್ಥೈಸಿಕೊಳ್ಳಬೇಕು. ದೀನಿನ ಸರ್ವ ವಿಷಯಗಳಲ್ಲಿ ಮಾರ್ಗದರ್ಶನವನ್ನು ನಾವು ಅವರಿಂದ ಪಡೆದುಕೊಳ್ಳಬೇಕು. ಏಕೆಂದರೆ ಕುರ್‌ಆನ್ ಏನು ಸುನ್ನತ್ ಏನು ಎಂಬುದರ ಸರಿಯಾದ ಜ್ಞಾನವಿರುವುದು ಅವರ ಬಳಿಯಲ್ಲಾಗಿದೆ. ತೌಹೀದಿನ ಸಂದೇಶವನ್ನು ಜನರಿಗೆ ಕಲಿಸಿಕೊಡುವಲ್ಲಿ

ಉಲಮಾಗಳ ಪಾತ್ರವೇನು ಎಂಬುದನ್ನು ನಾವು ಇನ್ನು ಮುಂದೆ ಬರುವ ತರಗತಿಯಲ್ಲಿ ಕಲಿಯೋಣ.

ಸತ್ಯವನ್ನು ಸತ್ಯವಾಗಿಯೂ, ಮಿಥ್ಯವನ್ನು ಮಿಥ್ಯವಾಗಿಯೂ ಅರಿಯುವಂತೆಯೂ ಹಾಗೂ ಅವುಗಳಿಂದ (ಮಿಥ್ಯಗಳಿಂದ) ದೂರವಿರುವಂತೆಯೂ ನಮಗೂ ನಮ್ಮ ಕುಟುಂಬಕ್ಕೂ ಅಲ್ಲಾಹು ತೌಫೀಕ್ ನೀಡಲಿ –ಆಮೀನ್.

ಅತ್ಯುತ್ತಮವಾಗಿ ಅರಿತವನು ಅಲ್ಲಾಹುವಾಗಿದ್ದಾನೆ. ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ನಮ್ಮ ಪ್ರವಾದಿಯವರ ಮೇಲೆ, ಅವರ ಕುಟುಂಬದವರ ಮೇಲೆ ಹಾಗೂ ಅವರ ಸಹಚರರ ಮೇಲೆ ಸದಾ ಇರಲಿ.